


# ಗೊಂಬೆಗೆ ತಿನ್ನಿಸಲ್ಲ ಗಲೀಜಾಗುತ್ತೆ!

★ *ನಿನ್ನ ಹೆಸರು ಏನು? ಅಪ್ಪ ಅಮ್ಮ ಯಾರು? ಏನು ಮಾಡುತ್ತೀಯಾ?*

ನನ್ನ ಹೆಸರು ಪ್ರಿಯಾಂಕ. ಟಿವಿಯಲ್ಲಿ ಶಾನ್ವಿ. ನನಗೆ ಗೊಂಬೆ ಅಂದರೆ ತುಂಬಾ ಇಷ್ಟ. ಅದರ ಹೆಸರು ನೀಲಿ. ಅದರ ಜೊತೆ ಆಟ ಆಡುತ್ತೇನೆ. ಗಲೀಜು ಆಗುತ್ತೆ ಅಂತ ಅದಕ್ಕೆ ಚಾಕಲೇಟ್ ತಿನ್ನಿಸಲ್ಲ. ಅಪ್ಪ ನಾಗೇಂದ್ರ, ಅಮ್ಮ ಸುರೇಖಾ ಎಂದು 'ನೀಲಿ'ಯ ಶಾನ್ವಿ ಪಟಪಟ ಮಾತನಾಡುತ್ತಾಳೆ.

ಆಕೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ದೊಡ್ಡವೀರನಹಳ್ಳಿಯ ಕೃಷಿ ಕುಟುಂಬದ ಹುಡುಗಿ. ತಮ್ಮ ಹಳ್ಳಿ ಸಮೀಪದ ಬೆಳ್ಳಾವಿಯ 'ಕಿಡ್ಸ್ ಇಂಟರ್ ನ್ಯಾಷನಲ್' ಶಾಲೆಯಲ್ಲಿ ಒಂದನೇ ತರಗತಿಯಲ್ಲಿ ಓದುತ್ತಿದ್ದಾಳೆ.

★ *ಮಗುವಿನ ವಯಸ್ಸಿಗೆ ಮೀರಿದ ಜವಾಬ್ದಾರಿಯನ್ನು ಹೇರಿದಂತೆ ಅನ್ನಿಸುವುದಿಲ್ಲವೇ?*

ಇಲ್ಲ. ಆಕೆ ತುಂಬಾ ಚುರುಕಾಗಿದ್ದಾಳೆ. ಶಾಲೆಯಲ್ಲಿಯೂ ಓದಿನಲ್ಲಿ ಮುಂದಿದ್ದಾಳೆ. ಶೂಟಿಂಗ್ ರಜೆಯಿದ್ದಾಗ ಮಾಡುತ್ತಾರೆ. ನಿರ್ದೇಶಕ ಸತೀಶ್ ಕೃಷ್ಣ ಕೂಡ ಮಗುವಿನ ಮಟ್ಟಕ್ಕೆ ಇಳಿದು ಹೇಳಿಕೊಡುತ್ತಾರೆ. ಆಕೆ ಸಲೀಸಾಗಿ ನಟಿಸಲು ಅನುಕೂಲವಾಗಿದೆ. ಮಗು ಕೂಡ ನಟನೆಯನ್ನು ಇಷ್ಟಪಡುವುದರಿಂದ ಕಷ್ಟ ಅಂತ ಅನ್ನಿಸುತ್ತಿಲ್ಲ. ಆಕೆ ಇತ್ತೀಚೆಗೆ ಸಿನಿಮಾ ಕ್ಷೇತ್ರದಲ್ಲಿಯೇ ಮುಂದುವರೆಯುವ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾಳೆ. ಚಿತ್ರೀಕರಣದ ದಿನ ನಮ್ಮೂರಿಂದ ಕರೆದುಕೊಂಡು ಬಂದು ಮತ್ತೆ ಕಳುಹಿಸುತ್ತಾರೆ. ಬಂದು ಹೋಗುವ ತಲೆ ಬಿಸಿ ಕೂಡ ಇಲ್ಲ. ಆದರೂ ಒಂದಿಷ್ಟು ಓಡಾಟ ಜಾಸ್ತಿ ಆಗಿದೆ. ಏನು ಮಾಡಲು ಆಗುತ್ತದೆ? ಏನಾದರೂ ಮಾಡಬೇಕು ಎಂದರೆ ಕಷ್ಟಪಡಲೇ ಬೇಕಲ್ಲ? ಎಂದು ಹೇಳುತ್ತಾರೆ ಪ್ರಿಯಾಂಕ ತಾಯಿ ಸುರೇಖಾ.

ಪೋಷಕರಾಗಿ ನಾವು ಮೊದಲ ಆದ್ಯತೆಯನ್ನು ಆಕೆಯ ಶಿಕ್ಷಣಕ್ಕೆ ನೀಡುತ್ತಿದ್ದೇವೆ. ಆಕೆ ವೈದ್ಯಳೇ ಆಗಬೇಕು ಎಂಬುವುದು ನಮ್ಮ ಕನಸು. ಬಣ್ಣದ ಲೋಕ ಎಷ್ಟು ದಿನ ಅಂತ ಹೇಳಲು ಬರುವುದಿಲ್ಲ. ಅನಿಶ್ಚಿತತೆ ಹೆಚ್ಚು ಕಾಡುತ್ತದೆ. ಆರ್ಥಿಕವಾಗಿಯೂ ಆಕೆ ದುಡಿಯಬೇಕಾದ ಅನಿವಾರ್ಯತೆ ಇಲ್ಲ. ತೋಟ, ಮನೆ ಇದೆ. ನಮ್ಮ ಯಜಮಾನರೂ ಕೂಡ ಆಕೆಯ ಇಷ್ಟದಂತೆ ಇರಲಿ ಎಂದು ಹೇಳುತ್ತಾರೆ. ಆಕೆಯ ಕೇಳಿದ್ದೆಲ್ಲವನ್ನೂ ಕೊಡಿಸುತ್ತಾರೆ.

★ *ಬಣ್ಣಕ್ಕೆ ಬೆರಗಾಗಿದ್ದು ಹೇಗೆ?*

ಆಕೆ ಇನ್ನೂ ಚಿಕ್ಕವಳಿದ್ದಾಗ ದುಂಡು ದುಂಡಗೆ ಚೆನ್ನಾಗಿದ್ದಳು. ನಮ್ಮ ಸಂಬಂಧಿಯೊಬ್ಬರು ಈಕೆಗೆ ಏಕೆ ಮಾಡೆಲಿಂಗ್ ಮಾಡಿಸಬಾರದು ಎಂದು ಸಲಹೆ ನೀಡಿದರು. ನಾವು ಸುಮ್ಮನೆ ಫೋಟೋ ತೆಗೆಸಿದೆವು. ಆಗ ಆಕೆಗೆ 2.5 ವರ್ಷ. ಅದಾದ ನಂತರ ಜಾಹೀರಾತುಗಳಲ್ಲಿಯೂ ನಟಿಸಿದಳು. ಮಾಡೆಲಿಂಗ್ ಮಾಡುತ್ತಿದ್ದವಳಿಗೆ 'ಕೇರ್ ಆಫ್ ಫುಟ್‌ಪಾತ್–2'ನಲ್ಲಿ ನಟಿಸುವ ಅವಕಾಶ ಸಿಕ್ಕಿತು. ಅದಾಗಿ ಒಂದಾದ ಮೇಲೆ ಒಂದರಂತೆ ಅವಕಾಶಗಳು ಸಿಕ್ಕವು 'ಮದುವೆಯ ಮಮತೆಯ ಕರೆಯೋಲೆ' 'ಸಾಧನೆ' 'ಟೈಗರ್'ನಲ್ಲಿ ನಟಿಸಿದಳು. ಈಗ 'ನೀಲಿ'ಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ.

★ *ಹಣಕಾಸಿನ ವಿಷಯದಲ್ಲಿ ಹೇಗೆನಿಸುತ್ತಿದೆ?*

ಮೊದಲೆಲ್ಲಾ ಅಷ್ಟಕ್ಕಷ್ಟೇ. ಕೆಲವರು ಕೊಟ್ಟರೆ... ಕೆಲವರು ಕೊಡುತ್ತಿರಲಿಲ್ಲ. ಕೊಟ್ಟರೂ ಮಧ್ಯವರ್ತಿಗಳ ಪಾಲಾಗುತ್ತಿತ್ತು. ನಮಗೂ ದುಡ್ಡು ಮುಖ್ಯವಲ್ಲ. ಆಕೆಗೆ ಒಳ್ಳೆಯ ಹೆಸರು ಸಿಗಲಿ ಎನ್ನುವುದಷ್ಟೇ ಗುರಿ. ಹೀಗಾಗಿ ಎಲ್ಲೂ ನಾವು ಹಣಕ್ಕಾಗಿ ಒತ್ತಡ ಹಾಕುತ್ತಿರಲಿಲ್ಲ. ಸಹಜವಾಗಿ ಅದನ್ನು ಕೆಲವರು ಬಳಸಿರಬಹುದು. ಈಗ ಟಿವಿಯಲ್ಲಿ ಎಲ್ಲಾ ರೀತಿಯಿಂದಲೂ ಚೆನ್ನಾಗಿದೆ.

★ *ನಟನೆ ಮಗಳಲ್ಲಿ ಎಂತಹ ಬದಲಾವಣೆ ತಂದಿದೆ ಅನ್ನಿಸುತ್ತದೆ?*

ಆಕೆಗೊಂದು ಅನನ್ಯತೆಯನ್ನು ನಟನೆ ತಂದುಕೊಟ್ಟಿದೆ. ಆ ಮೂಲಕ ನಮ್ಮನ್ನೂ ಜನ ಗುರುತಿಸುವಂತೆ ಮಾಡಿದ್ದಾಳೆ. ಶಾಲೆಯಲ್ಲಿಯೂ ಆಕೆಗೊಂದು ವಿಶೇಷತೆ ಸಿಕ್ಕಂತಾಗಿದೆ. ಶಿಕ್ಷಕರೂ ತುಂಬಾ ಪ್ರೋತ್ಸಾಹ ನೀಡುತ್ತಿದ್ದಾರೆ.

■ ರಾಗು